# ಕಾನನ


**AUGUST 2012**

## ನಿಸರ್ಗದೆಡೆಗೆ ಪಯಣ



WILDLIFE CONSERVATION GROUP

© WCG



# ಕಾನನ

AUGUST 2012

ನಿಸರ್ಗದೆಡೆಗೆ ಪಯಣ

## ಲೇಖನಗಳು


* ಭಾರತದ ಎರಡನೇ ಮರುಭೂಮಿ ಕರ್ನಾಟಕ – ಧನಂಜಯ ಜೀವಾಳ.ಬಿ.ಕೆ
* ಕಾಡುಹಂದಿ ಮತ್ತು ಕಾಡು – ಶಂಕರಪ್ಪ ಕೆ.ಪಿ
* ಹಕ್ಕಿಲೋಕ – ಅಶ್ವಥ.ಕೆ.ಎನ್
* ವಿದ್ಯಾರ್ಥಿಗಾಗಿ ವಿಜ್ಞಾನ – ಮುರಳಿ.ಎಸ್
* ಪಾಳು ನಗರಿ – ಕೃಷ್ಣನಾಯಕ್


ಅನಿಸಿಕೆ

E-mail: kaanana.mag@gmail.com

ಮುಖಪುಟ: ಶರಾವತಿ ನದಿ

© W C G

August 19th World Photography Day

www.worldphotoday.org

# ಸಂಪಾದಕೀಯ

ಜೀವಕ್ಕೆ ಜೀವರಸವನ್ನು ಒದಗಿಸುತ್ತಿರುವ ಮಣ್ಣು, ಉಸಿರಾಡುವ ಗಾಳಿ, ಕುಡಿಯುವ ನೀರು ಹಾಗು ಸೂರ್ಯನ ಕಿರಣದಲ್ಲಿನ ಶಕ್ತಿಯ ಪೊಟ್ಟಣಗಳನ್ನು ಸಂಗ್ರಹಿಸಿಡುವಂತಹ ಸಾಮರ್ಥ್ಯವಿರುವ ಸಣ್ಣ ಪಾಚಿ ಹಾಗು ದೊಡ್ಡ ಮರ. ಇವೆಲ್ಲವುಗಳ ನಡುವೆ ನಮ್ಮ ಕಣ್ಣಿಗೆ ಕಾಣಿಸದಂತಹ ಅತಿಸೂಕ್ಷ್ಮ ಅವಿನಾಭಾವ ಸಂಬಂಧಗಳಿವೆ. ಅಭಿವೃದ್ಧಿಯ ಹೆಸರಿನಲ್ಲಿ ಕಳೆದ ನೂರು ವರ್ಷಗಳಲ್ಲಿ ಬಹಳಷ್ಟು ಈ ಮಣ್ಣು, ಗಾಳಿ, ನೀರು ಹಾಗು ಮರದ ನಡುವಿನ ಸೂಕ್ಷ್ಮ ಸಂಬಂಧಗಳನ್ನು ಮಾನವರಾದ ನಾವು ಹಾಳುಗೆಡವಿದ್ದೇವೆ. ಸಾವಿರಾರು ವರ್ಷಗಳಿಂದ ಭೂಮಿಯ ಒಳಗಿದ್ದ ಕಾರ್ಬನ್ ತೈಲವನ್ನು ಹೊರ ತೆಗೆದು ಮನಬಂದಂತೆ ಉರಿಸಿದ್ದೇವೆ.

ಓ ಮಿತ್ರರೇ ನಮಗಿರುವುದು ಒಂದೇ ಭೂಮಿ. ನಾವೇ ತುಳಿದ ಕೆಲವು ತಪ್ಪು ಹೆಜ್ಜೆಗಳಿಂದ, ಇಂದು ಮಿಲಿಯಾಂತರ ವರ್ಷಗಳಿಂದ ಸಮವಿದ್ದ ಈ ನೆಲ ಜಲದ ಜೀವಿಗಳ ಸೂಕ್ಷ್ಮ ಸಂಬಂಧಗಳು ಹಾಳಾಗಿವೆ. ವಾತಾವರಣದ ತಾಪಮಾನ ಹೆಚ್ಚುತ್ತಿದೆ. ನಮ್ಮ ನಗರಗಳೂ ಬೆಳೆಯುತ್ತಿವೆ. ತಿನ್ನುವ ಬಾಯಿಗಳು ಕೂಡ. .! ಇನ್ನು ಕೇವಲ ಹತ್ತು ವರ್ಷದಲ್ಲಿ ಪರಿಸರದ ಸೂಕ್ಷ್ಮ ಸಂಭಂದಗಳಿಗೆ ಬೆಲೆಕೊಟ್ಟು ಪರಿಸರ ಸ್ನೇಹಿ Life Style ನ್ನು ಪಾಲಿಸದೇ ಹೋದಲ್ಲಿ ಅನಾಹುತ ಕಟ್ಟಿಟ್ಟ ಬುತ್ತಿ ಎಂದು ಸಾವಿರಾರು ವಿಜ್ಞಾನಿಗಳು ಬಾಯಿಬಡಿದುಕೊಂಡು ಎಚ್ಚರಿಸುತ್ತಿದ್ದರೂ ನಾವು ಕಿವುಡರಂತೆ ವರ್ತಿಸುತ್ತಿದ್ದೇವೆ. ಹೀಗೆ ನಮ್ಮ ದೇಶದ ಕೇವಲ 2% ಜನರಿಗೆ ಸುಖವೀಯುವ ಅಭಿವೃದ್ಧಿ ಮುಂದುವರಿದರೆ ನಮ್ಮ ಮಕ್ಕಳು ಈ ಭೂಮಿಯ ಮೇಲೆ ಬದುಕುವುದೇ ಸಂಶಯ! ಈ ಎಲ್ಲವುದನ್ನು ಸರಿದಾರಿಗೆ ತರುವ ಗುರುತರ ಹೊಣೆ ನಿನ್ನದು ಹಾಗೂ ನನ್ನದೂ ಕೂಡ. ಮತ್ತೆ ಆಗಸ್ಟ್ 19 ವಿಶ್ವ ಛಾಯಾಗ್ರಾಹಕರ ದಿನ ಜಗತ್ತಿನ ಎಲ್ಲಾ ಛಾಯಾಗ್ರಾಹಕರಿಗೂ ಶುಭವಾಗಲಿ.

ಮೂಡಿಗೆರೆಯ ಶ್ರೀ ಬಿ.ಕೆ.ಧನಂಜಯ ಜೀವಾಳರವರು ಪಶ್ಚಿಮಘಟ್ಟಕ್ಕೆ ಯುನೆಸ್ಕೋ ನೀಡುತ್ತಿರುವ ಪರಾಂಪರಿಕ ತಾಣಗಳ ಮಾನ್ಯತೆಯ ಬಗ್ಗೆ ವಿವರವಾಗಿ “ಭಾರತದ ಎರಡನೇ ಮರುಭೂಮಿ ಕರ್ನಾಟಕ” ಎಂಬ ಲೇಖನದಲ್ಲಿ ಜೀವ ತುಂಬಿದ್ದಾರೆ. ಶಂಕರಪ್ಪ.ಕೆ.ಪಿ. ರವರು ತಾನು ಬದುಕುತ್ತಿರುವ ನೆಲೆಯಾದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಕಾಡುಪ್ರಾಣಿಗಳನ್ನು ಸಂರಕ್ಷಿಸ ಬೇಕು ಎಂಬ ಕೂಗನ್ನು “ಕಾಡುಹಂದಿ ಮತ್ತು ರಾಣಿ” ಎಂಬ ಲೇಖನದಲ್ಲಿ ಚಿತ್ರಿಸಿದ್ದಾರೆ. ಈ ಬಾರಿಯ ಹಕ್ಕಿಲೋಕದಲ್ಲಿ ಬೆಳವನ ಹಕ್ಕಿಯ ಬಗ್ಗೆ ಅಶ್ವಥ.ಕೆ.ಎನ್ ರವರು ಪರಿಚಯಿಸಿದ್ದಾರೆ. ಮತ್ತೆ ವಿ.ವಿ.ಅಂಕಣದಲ್ಲಿ ಮುರಳಿ .ಎಸ್ ರವರು ಸಾಲಾಮಾಂಡರ್ ಗಳ ಜೀವನದ ಒಂದು ಭಾಗವನ್ನು ಬಿಚ್ಚಿಟ್ಟಿದ್ದಾರೆ. “ಪಾಳು ನಗರಿ” ಎಂಬ ಕವನವನ್ನು ಕೃಷ್ಣನಾಯಕ್ ರವರು ಪರಿಸರದ ಅಳಿವು-ಉಳಿವಿನ ಬಗ್ಗೆ ಸುಂದರವಾಗಿ ರಚಿಸಿದ್ದಾರೆ.

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**

ಇ-ಮೇಲ್ ವಿಳಾಸ : kaanana.mag@gmail.com

**Wildlife Conservation Group**

# ಭಾರತದ ಎರಡನೇ ಮರುಭೂಮಿ - ಕರ್ನಾಟಕ!!!

ಶೇಕಡಾ 33 ರಷ್ಟು ಇರಬೇಕಾದ ಕಡೆ ಕೇವಲ ಶೇಕಡಾ 18 ನ್ನು ಮಾತ್ರ ಅದೂ ಸರ್ಕಾರೀ ದಾಖಲೆಗಳಲ್ಲಿ ಇರುವ ರಾಜ್ಯದ ಅರಣ್ಯ ಪ್ರದೇಶ ಇಡೀ ವಿಶ್ವದ ಆಸ್ತಿ. ಬೆಟ್ಟ-ಗುಡ್ಡ, ಗಿಡ-ಮರಗಳಲ್ಲಿ, ನದಿ-ತೊರೆಗಳಲ್ಲಿ ದೇವರನ್ನು ಕಾಣುವುದೆಂದರೆ ಯಾವುದೋ ಒಂದು ಮರ, ಒಂದು ಕಲ್ಲಿನ ತುಂಡನ್ನು ಗುಡಿಯೊಳಗಿರಿಸಿ, ಕುಂಕುಮ ಹಚ್ಚಿ, ಗಂಟೆ ಬಾರಿಸಿ ಪೂಜಿಸುವುದಲ್ಲ.

ಅನಗತ್ಯ ರಸ್ತೆಗಳು, ವಿವೇಚನಾರಹಿತ ಜಲವಿದ್ಯುತ್ ಯೋಜನೆಗಳು, ಪರಿಸರ ಪ್ರವಾಸೋದ್ಯಮದ ಹೆಸರಿನಲ್ಲಿ ನಡೆಯುತ್ತಿರುವ ಖಾಸಗಿಯವರ ಬಂಡವಾಳ ಹೂಡಿಕೆಗಳ ಮೂಲಕ ಸಮಸ್ತ ಜೀವಸಂಕುಲದ ಆಸ್ತಿಯನ್ನು ನಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಬಳಸುತ್ತಿರುವುದು ಅಕ್ಷಮ್ಯ. ಅರಣ್ಯವನ್ನು ಏಟಿಎಮ್ ಎಂದು ಭಾವಿಸಿ ದಿನನಿತ್ಯ ನಿರಂತರವಾಗಿ ಗೊತ್ತುಗುರಿಯಿಲ್ಲದೇ ದೌರ್ಜನ್ಯಕ್ಕೆ ಗುರಿಪಡಿಸಲಾಗುತ್ತಿದೆ. ಈ ಪ್ರಕೃತಿಯು ನಮ್ಮ ಮುಂದಿನ ದಿನಗಳಲ್ಲಿ ಮೈದಳೆಯಲಿರುವ ಜೀವಸಂಕುಲದ ಆಸ್ತಿ. ಅದು ನಾವು ನೀಡುತ್ತಿರುವ ದಾನವಲ್ಲ, ನಾವೇ ಇಲ್ಲಿ ಸಾಲಗಾರರು. ಈ ಅಮೂಲ್ಯ ಕಾಡುಗಳನ್ನು ರಕ್ಷಿಸಲು, ವಿಸ್ತರಿಸಲು ತ್ವರಿತ ಕ್ರಮ ಕೈಗೊಳ್ಳದಿದ್ದರೆ ಅದು ನಮ್ಮ ಮೂರ್ಖತನದ ಪರಮಾವಧಿ. ರಸ್ತೆ, ಜಲವಿದ್ಯುತ್, ಗಣಿಗಾರಿಕೆ, ತೈಲಸಾಗಣೆ, ಕೃಷಿಗಾಗಿ ಭೂಮಿ ಒತ್ತುವರಿ ಮುಂತಾದುವು ಸರ್ಕಾರೀ ಯೋಜನೆಗಳ ಹೆಸರಿನಲ್ಲಿ ಪರಿಸರದ ಮೇಲೆ ನಡೆಯುತ್ತಿರುವ ಅಮಾನುಷ ಅತ್ಯಾಚಾರ. ಅದರ ಪರವಾಗಿ ಮಾತನಾಡುವವರು ಆಧುನಿಕ ದುಶ್ಯಾಸನರೇ ಸರಿ.




ಹತ್ತಾರು ನದಿಗಳಿಗೆ ಉಗಮ ಸ್ಥಾನವಾದ ಪಶ್ಚಿಮಘಟ್ಟಗಳು ಪ್ರಪಂಚದ ಜೀವವೈವಿಧ್ಯದ ಹಾಟ್ ಸ್ಪಾಟ್ ಆಗಿದೆ. ಇಲ್ಲಿರುವ ಇರುವೆ, ಗೆದ್ದಲು, ಹುಲ್ಲು, ಪೊಟರೆಯೊಳಗಿನ ಹಕ್ಕಿ, ಧರೆಗುರುಳಿದ ಮರ, ಕಲ್ಲು ಇವೆಲ್ಲವಕ್ಕೂ ಅವುಗಳದೇ ಆದ ಜೈವಿಕ ಮಹತ್ವ ಇದೆ. ನಮ್ಮ ಯಾವುದೇ ರೀತಿಯ ಮಧ್ಯಪ್ರವೇಶವು ದೊಡ್ಡ ಜೈವಿಕ ದುರಂತಕ್ಕೆ ಕಾರಣವಾಗುತ್ತದೆ.

ಅಭಿವೃದ್ಧಿಯೆಂದರೆ ಏನು? ಕಾಡಿನೊಳಗೆ ರಸ್ತೆ ಮಾಡಿಸಿ ಗುತ್ತಿಗೆದಾರರಿಗೆ ಕೆಲಸ ಒದಗಿಸುವುದಾ?, ಪರ್ವತದ ಒಡಲು ಬಗೆದು ಖನಿಜ ಹೊರತೆಗೆಯುವುದಾ?, ಜೀವನದಿಗಳನ್ನು ಅಡ್ಡಗಟ್ಟಿ, ತಿರುವಿ ಕಾಡು ಮುಳುಗಿಸಿ

ಖಾಸಗಿಯವರಿಗೆ ಬಂಡವಾಳ ಹೂಡಲು ಅನುಕೂಲ ಮಾಡಿಕೊಡುವುದಾ? ಕಾಡಿನಂಚಿನಲ್ಲಿರುವ ಒತ್ತುವರಿ ಕೃಷಿಭೂಮಿಗೆ ವಾಣಿಜ್ಯ ಬೆಲೆ ದೊರಕಿಸುವುದಾ? ಎಲ್ಲಿ ಪುಕ್ಕಟೆ ಸಂಪನ್ಮೂಲ ಹಾಗೂ ಹಣ ಓಡಾಡುತ್ತದೆಯೋ ಅಲ್ಲೆಲ್ಲ ಪ್ರಕೃತಿಯ ಮೇಲೆ ದಾಳಿ ಅವ್ಯಾಹತವಾಗಿ ನಡೆಯುತ್ತದೆ.

ಜೈವಿಕ ಪರಿಸರವನ್ನು ಕಾಪಾಡುವುದಕ್ಕೇ ಯುನೆಸ್ಕೋ ಸ್ಥಳೀಯ ಸರ್ಕಾರಗಳಿಗೆ ಸಹಕಾರ ನೀಡುತ್ತಿರುವುದು ಒಂದು ರಚನಾತ್ಮಕ ಬೆಳವಣಿಗೆ. ಅದನ್ನು ಅರಿಯದೇ ತಿರಸ್ಕರಿಸಿ ದಾರ್ಷ್ಟ್ಯ ಮೆರೆದರೆ ಅದು ರಾಜ್ಯ ಸರ್ಕಾರದ ಅಕ್ಷಮ್ಯ ಅಪರಾದವೇ ಸರಿ. ಯಾರ ಹಿತವನ್ನು ಕಾಪಾಡಲು ಈ ವಿರೋಧವನ್ನು ತೋರಿಸುತ್ತಿದೆ ಎಂದು ಹೇಳಲಿ. ಗಿರಿಜನರು, ವಿದ್ಯುತ್ ಸಮಸ್ಯೆ, ವನ್ಯಜೀವಿ ರಕ್ಷಣೆ, ಮುಂತಾದವುಗಳಿಗೆ ಪ್ರಾಯೋಗಿಕ ಪರಿಹಾರವನ್ನು ಕಂಡುಕೊಳ್ಳಲಾಗದ ಸರ್ಕಾರ ತನ್ನ ಭಂಡತನವನ್ನು ಮರೆಮಾಚಲು ಯುನೆಸ್ಕೋ ಜತೆ ಗುದ್ದಾಡಿದೆವೆಂಬ ಹಮ್ಮಿಗೆ ಬಿದ್ದು ವರ್ತಿಸುವುದು ತಪ್ಪು. ಇದರಿಂದ ಯುನೆಸ್ಕೋ ಕಳೆದುಕೊಳ್ಳುವುದು ಏನೂ ಇಲ್ಲ, ನಷ್ಟವಾಗುವುದು ನಮ್ಮೆಲ್ಲರಿಗೆ ಮತ್ತು ನಮ್ಮ ನಿಮ್ಮೆಲ್ಲರನ್ನೂ ಕಾಪಾಡುತ್ತಿರುವ ಜೈವಿಕ ವ್ಯವಸ್ಥೆಗೆ.




ಹಂಪಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಾಗದೇ ಇರುವುದು ಸರ್ಕಾರದ ಅಸಮರ್ಥತೆಯ ನಿದರ್ಶನ. ಅಭಿವೃದ್ಧಿಯೆಂದರೆ ಕಾಂಕ್ರೀಟ್ ಕಟ್ಟಡ, ಟಾರು ರಸ್ತೆ, ವ್ಯಾಪಾರೀ ಮಳಿಗೆಗಳನ್ನು ನಿರ್ಮಿಸಲು ತಮ್ಮ ರಾಜಕೀಯ ಕಾರ್ಯಕರ್ತರಿಗೆ ಅನುವು ಮಾಡಿಕೊಡುವುದು ಎಂದುಕೊಂಡಿರುವುದು ನಮ್ಮ ತಿಳುವಳಿಕೆಗಿರುವ ಮಿತಿ, ಸೀಮಿತ ಸಂಪನ್ಮೂಲಗಳನ್ನು ಸುಸ್ತಿರವಾಗಿ ಉಳಿಸಿಕೊಂಡೇ ಹೆಜ್ಜೆ ಮುಂದಿಡಬೇಕಾದ ಅಗತ್ಯ ಹಿಂದೆಂದಿಗಿಂತಲೂ ಇಂದಿದೆ. ಅಲ್ಲಲ್ಲಿ ಅಲ್ಪಸ್ವಲ್ಪ ಉಳಿದಿರುವ ಕಾಡನ್ನು ವಿಚಲಿತಗೊಳಿಸದೇ ಅಭಿವೃದ್ಧಿ ಸಾಧಿಸಲು ಪ್ರಯತ್ನಿಸದಿರುವುದೇ ನಮ್ಮ ದೌರ್ಜನ್ಯ.


ಅರಣ್ಯ ಮತ್ತು ಪರಿಸರವೆಂದರೆ ಮರಮುಟ್ಟು ನೀಡುವ ಅಕ್ಷಯ ಖಜಾನೆ ಎಂದುಕೊಂಡಿರುವ ನಾಯಕರು, ಬಂಜರು ಪ್ರದೇಶದಲ್ಲಿ ನೀಲಗಿರಿ, ಅಕೇಶಿಯಾ, ಸಾಗುವಾನಿ ಗಿಡಗಳನ್ನು ನೆಡುವದರಿಂದಲೇ ಅರಣ್ಯ

ಸೃಷ್ಟಿಮಾಡಿದೆವೆಂದು ಬೀಗುವ ಅಧಿಕಾರಿಗಳು ಸ್ವಲ್ಪ ಪರಿಸರ ಅಧ್ಯಯನ ಮಾಡುವುದು ಒಳ್ಳೆಯದು. ಕಲ್ಲು ಕೀಳುವುದು, ಮರ ಉರುಳಿಸುವುದು, ಕಾಡು ಮುಳುಗಿಸುವುದು, ಪ್ರವಾಸಿಗರಿಂದ ದುಡ್ಡು ಪೀಕುವುದು, ರೈಲು ಹಳಿ ಹಾಕುವುದು, ಪೈಪ್ ಲೈನ್ ಆಳವಡಿಸುವುದು, ವಿದ್ಯುತ್ ಸಾಗಣೆಗೆ ಲೈನ್ ಎಳೆಯುವುದು ಮಾತ್ರ ಅಭಿವೃದ್ಧಿಯಲ್ಲವೆಂದು ಅರಿಯುವುದು ಅಗತ್ಯವಾಗಿದೆ.



ಗಣಿಗಾರಿಕೆ, ಕೈಗಾರಿಕೆ, ಕೃಷಿಭೂಮಿ ಒತ್ತುವರಿ, ಅರಣ್ಯ ಉತ್ಪನ್ನಗಳ ಲೂಟಿ ಇವನ್ನೆಲ್ಲಾ ನಿಯಂತ್ರಣದಲ್ಲಿಡಬೇಕಾದ ಸರ್ಕಾರ ಪಶ್ಚಿಮಘಟ್ಟಕ್ಕೆ ಯುನೆಸ್ಕೋ ನೀಡುತ್ತಿರುವ ಮಾನ್ಯತೆಯನ್ನು ವಿವೇಚನೆಯಿಂದ ಸ್ವಾಗತಿಸಿ, ಸಿಕ್ಕಿರುವ ಗೌರವವನ್ನು ಪಡೆಯಬೇಕು. ನೂರಾರು ದೇಶಗಳು ತಮ್ಮ ಪರಂಪರೆಯ ತಾಣಗಳಿಗೆ ಯುನೆಸ್ಕೋ ಮಾನ್ಯತೆ ಸಿಗಲೆಂದು ಆಶಿಸುತ್ತಿರುವಾಗ ಕರ್ನಾಟಕದ ವಿಮುಖತೆ ಆಶ್ಚರ್ಯ ಹಾಗೂ ಮರುಕ ಉಂಟುಮಾಡುತ್ತದೆ. ಬಂಡವಾಳಶಾಹಿಗಳು ಹಾಗೂ ಗುತ್ತಿಗೆದಾರರೇ ಈ ಸರ್ಕಾರವನ್ನು ನಡೆಸುತಿದ್ದಾರೋ ಎಂಬ ಅನುಮಾನ ಉಂಟಾಗುತ್ತಿದೆ. ಜನಸೇವೆ ಮಾಡಲು ಆಯ್ಕೆಯಾದವರು ಜನರ ಮೇಲೇ ಸವಾರಿ ಮಾಡುವುದು ಸರಿಯಲ್ಲ.

ಕಾಡಿನೊಳಗೆ ಪ್ರವೇಶಿಸಿದೊಡನೆ ಎದುರಾಗುವ ಮರದಿಂದ ಎಷ್ಟು ಚದರಡಿ ನಾಟಾ ಪಡೆಯಬಹುದೆನ್ನುವುದು, ಕಾಡು ಸವರಿ ತೋಟಮಾಡಿದರೆ ಎಷ್ಟು ಬೆಳೆ ತೆಗೆಯಬಹುದೆನ್ನುವುದು, ಕರಿಕಲ್ಲು ಕಿತ್ತರೆ ಎಷ್ಟು ಗಳಿಸಬಹುದೆನ್ನುವುದು, ನೆಲ ಅಗೆದರೆ ಎಷ್ಟು ಅದಿರು ಸಾಗಿಸಬಹುದೆನ್ನುವುದು, ನೀರು ಕಟ್ಟಿ ನಿಲ್ಲಿಸಿದರೆ ಎಷ್ಟು ಕಮಿಷನ್ ಪಡೆಯಬಹುದೆನ್ನುವುದು, ಗಿರಿಜನರನ್ನು ಸ್ಥಳಾಂತರಿಸಿದರೆ ಹುಟ್ಟುವ ಕಾಲೋನಿಗಳಲ್ಲಿ ಎಷ್ಟು ಓಟು ಪಡೆಯಬಹುದೆನ್ನುವುದು, ರಸ್ತೆ ನಿರ್ಮಾಣ ಮಾಡಲು ಗುತ್ತಿಗೆ ನೀಡಿದರೆ ಪಾರ್ಟಿಗೆ ಎಷ್ಟು ಫಂಡ್ ಪಡೆಯಬಹುದೆಂದು ಯೋಚಿಸುವುದನ್ನು ಬಿಟ್ಟು ಮರದ ಮೇಲಿರುವ ಆರ್ಕಿಡ್ ಗಳು, ತೊಗಟೆಯಡಿ ವಾಸಿಸುವ ಹುಳು-ಹುಪ್ಪಟೆಗಳು, ಕಪ್ಪೆಗಳು, ಪೊಟರೆಯ ಪಕ್ಷಿಗಳು, ನೆಲದಲ್ಲಿನ ಅಣಬೆಗಳು, ಮರಗಳು ಬೇರಿಳಿಸಿ ಬಾಷ್ಪೀಕರಿಸುವ ನೀರು, ನೆಲದಡಿಯ ಸೂಕ್ಷ್ಮ ಜೀವಿಗಳು ಕಲ್ಲಿನಡಿಯ ನೀರಿನ ಸಂಗ್ರಹ, ದೊಣೆಗಳೊಳಗಿನ ಸರಿಸೃಪಗಳು ಇವುಗಳನ್ನು ಗಮನಿಸಲಿ. ಇವೆಲ್ಲವೂ ಸೇರಿಯೇ ಅರಣ್ಯವಾಗುತ್ತದೆ.










ಪಶ್ಚಿಮಘಟ್ಟವನ್ನು ವಿಶ್ವಪರಂಪರೆಯ ಪಟ್ಟಿಗೆ ಯಾಕೆ ಸೇರಿಸಬೇಕೆಂದು ಕೇಳಿದರೆ ಕನಿಷ್ಠ ನೂರು ಕಾರಣ ನೀಡಬಹುದಾದರೆ, ಯಾಕೆ ಸೇರಿಸಬಾರದೆಂಬುದಕ್ಕೆ ಮೂರು ವಿತಂಡವಾದಗಳು ಸಿಗಬಹುದು. ಜೈವಿಕ ಪರಿಸರ, ಪರಿಸರ ವಿಜ್ಞಾನ, ಮಾಲಿನ್ಯ ನಿಯಂತ್ರಣ, ಅರಣ್ಯ ಸಂರಕ್ಷಣೆ ಮುಂತಾದುವುಗಳ ಬಗ್ಗೆ ತಳಮಟ್ಟದ ಚರ್ಚೆಯಾಗಬೇಕು. ಇಂದಿನ ಲಾಭಕ್ಕಾಗಿ ಮಿಲಿಯಾಂತರ ವರ್ಷಗಳ ಈ ಭೂಮಿಯನ್ನು ಬಲಿಕೊಡುವುದು ಬೇಡ. ಯುನೆಸ್ಕೋ ಪರಂಪರಾ ತಾಣಗಳ ನಿರ್ವಹಣೆಯ ಕುರಿತಾದ ನೀತಿನಿಯಮಾವಳಿಗಳನ್ನೇ ಪೂರ್ಣವಾಗಿ ಅಧ್ಯಯನ ಮಾಡದೇ ಸಾರಾಸಗಟಾಗಿ "ಜುಟ್ಟು" ಹೇಳಿಕೆಯನ್ನು ನೀಡಿರುವುದು ಎಷ್ಟರಮಟ್ಟಿಗೆ ಸರಿ? ಅರಣ್ಯ ಇಲಾಖೆಯ ಅಧಿಕಾರಿಗಳಲ್ಲದೇ ಆ ಕ್ಷೇತ್ರದಲ್ಲಿ ಪರಿಣತಿ, ಆಸಕ್ತಿಯುಳ್ಳ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು, ವಿಜ್ಞಾನಿಗಳು ಸೇರಿ ಸಮಗ್ರವಾಗಿ ಬರಲಿ, ಬಿಡಲಿ ನಮಗೆ ನಮ್ಮ ಅರಣ್ಯ ಪ್ರದೇಶದ ಸೂಕ್ಷ್ಮ ಮೂಲಸ್ವರೂಪವನ್ನು ಉಳಿಸಿಕೊಳ್ಳುವುದು ಮುಖ್ಯ.

ವೈಜ್ಞಾನಿಕ ಅನ್ವೇಷಣೆಗಳ ಅಳವಡಿಕೆ, ಐಷಾರಾಮಿ ಜೀವನ ಶೈಲಿಗಳ ಅನುಕರಣೆ, ವಿದೇಶೀ ಜೀವನ ಶೈಲಿಗಳತ್ತ ನೋಡುವ, ದನ ಸಾಕುವುದು ಹೇಗೆಂದು ತಿಳಿಯಲು ವಿದೇಶೀ ಪ್ರವಾಸ ಹೋಗುವ ಮಂತ್ರಿ ಮಹೋದಯರಿಗೆ, ಶೌಚಾಗ್ರುಹಗಳ ನಿರ್ಮಾಣ ತಂತ್ರಜ್ಞಾನ ತಿಳಿಯಲು ವಿದೇಶಕ್ಕೆ ಅಧ್ಯಯನ ತಂಡವನ್ನು ಕಳಿಸುವ ಸರ್ಕಾರಕ್ಕೆ, ಕೆರೆ ಹೂಳೆತ್ತುವ ನೆಪದಲ್ಲಿ, ರಸ್ತೆ ನಿರ್ಮಾಣದ ಕಾರಣಕ್ಕೆ, ಚರಂಡಿ ನಿರ್ಮಾಣದ ನೆಪದಲ್ಲಿ ದುಡ್ಡುಹೊಡೆಯಲು ವಿಶ್ವಬ್ಯಾಂಕ್ ನೆರವಿಗೆ ಕೈಒಡ್ಡುವ ನಮಗೆ, ನಮ್ಮ ಕಾಡನ್ನು ರಕ್ಷಣೆ ಮಾಡಲು ವಿಶ್ವಸಂಸ್ಥೆಯ ನೆರವಿನ ಅಗತ್ಯವಿಲ್ಲ ಎನ್ನುವುದು ಹಾಸ್ಯಾಸ್ಪದವಾಗಿ ಕಾಣುತ್ತದೆ. ನಾವೇ ಸ್ಥಳೀಯರು ರಕ್ಷಣೆ ಮಾಡುತ್ತೇವೆಂದು ಈವರೆವಿಗೆ ಕಾಪಾಡಿಕೊಂಡಿರುವುದು ನಮ್ಮ ಕಣ್ಣಮುಂದಿದೆ. ನಮ್ಮೊಡನೆ ಯಾರೋ ಸದುದ್ದೇಶ ಹೊಂದಿರುವವರು ಕೈಜೋಡಿಸಿದರೆ ಎಲ್ಲಿ ನಮ್ಮಗಳ ಹುನ್ನಾರ ಜಾರಿಯಾಗಲು ಕಷ್ಟವಾಗುತ್ತದೋ ಎಂಬ ಭಯ ಅಧಿಕಾರಸ್ಥರನ್ನು ಕಾಡುತ್ತಿದೆ. ಈ ಅರಣ್ಯ ಪ್ರದೇಶ ಯಾರೋಬ್ಬರ ಸ್ವಂತ ಆಸ್ತಿಯಲ್ಲ, ಇಡೀ ಜಗತ್ತಿನ ಜೀವರಾಶಿಯ ಮಿಲಿಯಾಂತರ ವರ್ಷಗಳ ಫಲಶೃತಿ.



ಸ್ಥಳೀಯರಿಗೆ ಇಲ್ಲಸಲ್ಲದ ಸುಳ್ಳು ಹೇಳಿ, ಆಮಿಷ ಒಡ್ಡಿ ಹಾದಿತಪ್ಪಿಸುವುದನ್ನು ಬಿಟ್ಟು ಪಶ್ಚಿಮಘಟ್ಟವನ್ನು ಕಾಪಾಡುವತ್ತ ಗಮನ ಹರಿಸುವುದು ಮತ್ತು ಜವಾಬ್ದಾರಿಯುತ ಹಾಗೂ ತಿಳುವಳಿಕೆಯುಳ್ಳ ನಾಗರೀಕರನ್ನು ಒಳಗೊಂಡ ಜೈವಿಕ ಪರಿಸರ ರಕ್ಷಣ ತಂಡವನ್ನು ತಾಲ್ಲೂಕುವಾರು ರಚಿಸುವುದು ಇಂದಿನ ಅಗತ್ಯವಾಗಿದೆ. ಅರಣ್ಯವಾಸಿಗಳನ್ನು ಯಾವುದಾದರೂ ನೆಪದಲ್ಲಿ ಒಕ್ಕಲೆಬ್ಬಿಸಿ ಉದ್ದಿಮೆಗಳಿಗೆ ಕಾರ್ಮಿಕರನ್ನು ಸೃಷ್ಟಿಸಲು ಪ್ರಯತ್ನಿಸುತ್ತಿರುವ ಬಂಡವಾಳಶಾಹಿಗಳೊಂದಿಗೆ ಕೈಜೋಡಿಸುತ್ತಿರುವ ಆಡಳಿತ ವ್ಯವಸ್ಥೆ ತಮ್ಮ ಅಧಿಕಾರದ ಅವಧಿಯಲ್ಲಿ ಇಡೀ ಕಾಡನ್ನೇ ಹರಾಜು ಹಾಕಲು ಹೊರಟಿರುವುದು ವಿಪರ್ಯಾಸ. ಸ್ಥಳೀಯ ಅಮಾಯಕ ಜನರಿಗೆ ಪರಿಹಾರ ಹಣದ ಆಮಿಶ ಒಡ್ಡಿ ಅವರನ್ನು ಹಾದಿ ತಪ್ಪಿಸಲು ಸರ್ಕಾರದ ಬಳಿ ಸಾಕಷ್ಟು ದಾರಿಗಳಿವೆ, ಕೃಷಿ ಮಾಡುವುದು ನಷ್ಟದ ಬಾಬತ್ತೆಂದು ರೈತರಿಗೆ ಅನ್ನಿಸುವಂತೆ ಪರಿಸ್ಥಿತಿ ಸೃಷ್ಟಿಮಾಡಿ, ಪರಿಹಾರ ರೂಪದ ಹಣದಲ್ಲಾದರೂ ಜೀವನ ಮಾಡುವ ಎಂದು ನಗರಕ್ಕೆ ವಲಸೆ ಹೋಗುವಂತೆ ಮಾಡುವುದು, ನಗರದಲ್ಲಿ ಇರುವ ಅಧಿಕಾರಸ್ತರ ಉದ್ದಿಮೆಗಳಿಗೆ ಕೂಲಿ-ಕಾರ್ಮಿಕರನ್ನು ಪೂರೈಕೆ ಮಾಡುವುದು ಇದರ ಪರೋಕ್ಷ ಹುನ್ನಾರ. ಇಲ್ಲಿ ರೈತರ ಮೂರುಕಾಸಿಗೆ ಮಾರಿದ ಭೂಮಿಯನ್ನು ತಾವೇ ಖರೀಧಿಸಿ, ರೈತರನ್ನೇ ಕೂಲಿಗಿಟ್ಟುಕೊಳ್ಳುವ ವ್ಯವಸ್ಥಿತ ಲೂಟಿಯ ಭಾಗವೇ ಈ ಎಲ್ಲಾ ವಿದ್ಯಮಾನಗಳು.




ಈಗ ಗುರುತಿಸಿರುವ ಅರಣ್ಯಪ್ರದೇಶಗಳು ಮಾತ್ರವಲ್ಲ, ರಾಜ್ಯದಾದ್ಯಂತ ಇರುವ ಇನ್ನೂ ಹಲವು ತಾಣಗಳನ್ನು ಆಯ್ಕೆ ಮಾಡಿ ಶೀಘ್ರವೇ ಯುನೆಸ್ಕೋ ಮಾನ್ಯತೆಗೆ ಶಿಫಾರಸ್ಸು ಮಾಡಿ ಸರ್ಕಾರ ಕೋರಿಕೆ ಸಲ್ಲಿಸಬೇಕು. ಮರಗಳ್ಳರು, ಗಣಿಕೋರರು, ಅರಣ್ಯ ಒತ್ತುವರಿದಾರರು, ರೆಸಾರ್ಟ್ ಬಂಡವಾಳಿಗರು, ಭ್ರಷ್ಟ ಅಧಿಕಾರಿಗಳು, ಸಮಯ ಸಾಧಕ ರಾಜಕಾರಣಿಗಳು ಒಟ್ಟಾಗಿ ಸೇರಿ ನಡೆಸಿರುವ ಲೂಟಿಗೆ ಸರ್ಕಾರ ಮಣಿದರೆ ಈ ರಾಜ್ಯದ ಜನತೆ ಅವರನ್ನು ಎಂದೂ ಕ್ಷಮಿಸಲಾರರು. ಜೈವಿಕ ಪರಿಸರ ಎಂದರೆ ಮೂಲಭೂತವಾಗಿ ಏನೆಂದೇ ತಿಳಿಯದವರು ವಾದ ಮಂಡಿಸುವುದನ್ನು ನೋಡಿದರೆ ನಾವು ಈ ಮಟ್ಟಿಗಿನ ಬೌದ್ಧಿಕ ಅಧಃಪತನ ಕಂಡಿದ್ದೇವೆಯೇ ಎಂದು ದಿಗ್ಭ್ರಮೆ ಉಂಟಾಗುತ್ತದೆ. ಓಟು ಗಳಿಸಿ ಅಧಿಕಾರ ಪಡೆದಿದ್ದಾರೆ ಎಂಬ ಒಂದೇ ಕಾರಣಕ್ಕೆ ರಾಜಕಾರಣಿಗಳ ಮುಂದೆ ಈ ನಾಡಿನ ಬುದ್ಧಿಜೀವಿಗಳು ಅಂಗೈಯಷ್ಟು ಸ್ಪಷ್ಟವಾಗಿರುವ ಸತ್ಯವನ್ನು ಪ್ರತಿಪಾದಿಸಲು ಕೈ ಮುಗಿದು ಪ್ರಾರ್ಥಿಸುವ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ ನಮ್ಮೆಲ್ಲರಿಗೂ ನಾಚಿಕೆಯ ವಿಷಯ. ಹೊಟ್ಟೆಗೆ ಅನ್ನ ತಿನ್ನಿ ಎಂದು ಹೇಳುವುದಕ್ಕೂ ಕೈ ಜೋಡಿಸಿ ಬೇಡಬೇಕಾಗಿರುವುದು ಪರಿಸ್ಥಿತಿಯ ವ್ಯಂಗ್ಯ. ಮಲೆಕುಡಿಯರು, ಸಿದ್ಧಿಯರನ್ನು ಮುಖ್ಯವಾಹಿನಿಗೆ ತರುತ್ತೇವೆಂದು ಬಂಬಡಾ ಬಾರಿಸಿತ್ತಿರುವುದರ ಹಿಂದೆ ಇರುವ ಉದ್ದೇಶ ಎಂಥವರಿಗೂ ಅರ್ಥವಾಗುವಂತದ್ದೇ. ಕಾಡುಜನರಿಗಾಗಿ ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದ್ದೇವೆ ಎಂದು ಜಾಗಟೆ ಹೊಡೆಯುತ್ತಿರುವವರು ಈ ಎಲ್ಲಾ ಕಾರ್ಯಗಳನ್ನು ಅರಣ್ಯ ಲೂಟಿ ಹೊಡೆಯಲು ಮೂಲಸೌಕರ್ಯವಾಗಿ ಹೊಂದುಕೊಳ್ಳುತ್ತಿದ್ದಾರೆ ಅಷ್ಟೇ. ಇಲ್ಲಿನ

ಕಾಮಗಾರಿಗಳ ಗುತ್ತಿಗೆಯ ಫಲಾನುಭವಿಗಳು ಆಯಾ ಪಕ್ಷದ ಕಾರ್ಯಕರ್ತರುಗಳು, ಕೆಲಸಕ್ಕಾಗಿ ಗುತ್ತಿಗೆಯಲ್ಲ, ಗುತ್ತಿಗೆದಾರರಿಗಾಗಿ ಕೆಲಸದ ಸೃಷ್ಟಿಯಾಗುತ್ತಿದೆ. ನಮ್ಮ ಕಾನೂನಿನ ಸದುಪಯೋಗ ಪಡೆದು ಈವರಗೆ ಅರಣ್ಯ ರಕ್ಷಣೆ ಮಾಡಿರುವುದರ ಚಿತ್ರಣ ನಮ್ಮ ಮುಂದೆ ಇದೆ. ವಿಶ್ವ ಪರಂಪರೆಯ ಪಟ್ಟಿಗೆ ಅರಣ್ಯ ಪ್ರದೇಶವನ್ನು ಸೇರಿಸುವುದರಿಂದ ಯಾವುದೇ ಲಾಭವಿಲ್ಲ ಎಂದಿರುವ ಸಚಿವರು ಈ "ಲಾಭ" ಪದದ ಅರ್ಥವ್ಯಾಪ್ತಿಯನ್ನು ವಿವರಿಸಿದರೆ ಈ ನಾಡಿನ ಜನತೆಗೆ ಉಪಕಾರವಾಗುತ್ತದೆ.

ನಮಗೆ ಪ್ರವಾಸೋದ್ಯಮದ ಹೆಸರಿನಲ್ಲಿ ಹರಿದು ಬರುವ ಹಣ ಬೇಡ, ಹಣದಿಂದ ನಮಗೆ ಆಮ್ಲಜನಕ, ಶುಭ್ರ ನೀರು , ಆರೋಗ್ಯಕರ ವಾತಾವರಣ ಸಿಗುವುದಿಲ್ಲ. ನಮಗೆ ನಮ್ಮ ಅರಣ್ಯ ಉಳಿಯಬೇಕು, ಹೆಚ್ಚು ವಿಸ್ತಾರವಾಗಿ ಬೆಳೆಯಬೇಕು ಮತ್ತು ನೈಸರ್ಗಿಕವಾಗಿರಬೇಕು. ಅರಣ್ಯದೊಳಗೆ ಬದುಕುತ್ತಿರುವವರು ಈ ಮೂರನ್ನು ಗಮನದಲ್ಲಿಟ್ಟಿಕೊಂಡು ಪ್ರಕೃತಿಯೊಡನೆ ಹೊಂದಿಕೊಂಡು ಜೀವಿಸಬೇಕು.

2005 ರಲ್ಲಿ ಕರ್ನಾಟಕ ಸರ್ಕಾರವೇ ಯುನೆಸ್ಕೋ ಮಾನ್ಯತೆ ಕೋರಿ ಮನವಿ ಸಲ್ಲಿಸಿದ್ದರೆ ಇಂದಿನ ಸರ್ಕಾರ ಸಿಕ್ಕಿರುವ ಮಾನ್ಯತೆಯನ್ನು ತಿರಸ್ಕರಿಸಿ ಭಾರೀ ಪ್ರಮಾದವನ್ನೇ ಮಾಡುತ್ತಿದೆ. ಜನತೆ ತಮಗೆ ನೀಡಿರುವ ಪರಮಾಧಿಕಾರದಿಂದ ಈವರೆವಿಗೆ ಏನೇನನ್ನು ಮಾಡಿದ್ದೀರೆಂಬುದು ಕಣ್ಣೆದುರೇ ಇದೆ. ಯಾರಿಗೂ ಬೇಕಿಲ್ಲದ ಕಾಮಗಾರಿಗಳನ್ನು ಅರಣ್ಯದೊಳಗೆ ನಡೆಸಿದ್ದರಿಂದ ಸರ್ಕಾರೀ ಖಜಾನೆ ಖಾಲಿಯಾಯ್ತಲ್ಲದೇ, ಹಿಂಬಾಲಕರ ಜೇಬು ಈ ನೆಪದಲ್ಲಿ ತುಂಬಿತು. ಪರಂಪರಾ ತಾಣವಾಗಿ ಗುರುತಿಸಿರುವ ಹತ್ತು ಸ್ಥಳಗಳಲ್ಲಿ ಐದು ತಾಣಗಳು ರಾಷ್ಟ್ರೀಯ ಉದ್ಯಾನ ಮತ್ತು ವನ್ಯಜೀವಿ ಧಾಮಗಳಾಗಿದ್ದು, ಇನ್ನು ಐದು ರಕ್ಷಿತಾರಣ್ಯಗಳೇ ಆಗಿವೆ. ಸರ್ಕಾರ ಈವರೆಗೆ ಮಾಡಿರುವ ಸಂರಕ್ಷಣಾ ಕೆಲಸಗಳನ್ನು ಮಾನ್ಯಮಾಡುವುದಷ್ಟೇ ಯುನೆಸ್ಕೋದ ಉದ್ದೇಶವಾಗಿದೆ.

ಕೆಸರಿನಲ್ಲಿ ಸಿಕ್ಕಿಹಾಕಿಕೊಡಿರುವ ವಾಹನವನ್ನು ತಳ್ಳಲು ನಮ್ಮ ಜೊತೆ ದಾರಿಹೋಕರ್ಯಾರೋ ಕೈಜೋಡಿಸಿದಂತೆ ಅಷ್ಟೇ. ಅದಕ್ಕೆ ಯಾಕೆ ಈ ಅವಾಂತರ ಸೃಷ್ಟಿಯಾಗಿದೆಯೊ ಆಶ್ಚರ್ಯವಾಗುತ್ತಿದೆ. ವನಮಹೋತ್ಸವದಂದು ಒಂದು ಗಿಡ ಕೈಯಲ್ಲಿ ಹಿಡಿದು ಫೋಟೋ ತೆಗೆಸಿಕೊಂಡು ಪೇಪರಿನಲ್ಲಿ ಹಾಕಿಸಿಕೊಳ್ಳುವುದೇ ಪರಿಸರ ರಕ್ಷಣೆ ಎಂದುಕೊಂಡಿರುವುದು ಹಾಸ್ಯಾಸ್ಪದ. ಯಾರೋ ಕೆಲವು ಬುದ್ಧಿಗೇಡಿಗಳ ತಪ್ಪು ನಿರ್ಧಾರದಿಂದ ಕರ್ನಾಟಕ ಜನತೆ ಮೂರ್ಖರೆಂಬ ಹಣೆಪಟ್ಟಿ ಧರಿಸುವ ಕಾಲ ಬಂದಿದೆ. ಅತ್ಯಂತ ಮುಖ್ಯ ನಿರ್ಧಾರಗಳನ್ನು ಮತ್ತು ಸಮಸ್ಯೆಗಳನ್ನು ಜನರಿಂದ ದೂರವಿಟ್ಟು ಮುಚ್ಚಿಹಾಕುವ ಹುನ್ನಾರ ನಾಡಿಗೆ ಒಳಿತನ್ನು ಮಾಡುವುದಿಲ್ಲ. ನಮ್ಮ ನೈಸರ್ಗಿಕ ಕಾಡನ್ನು ಮೂಲಧನವನ್ನಾಗಿಟ್ಟುಕೊಂಡು ಅದರಿಂದ ಬರುವ ಬಡ್ಡಿಯನ್ನಷ್ಟೇ ನಾವು ಬಳಸುವುದನ್ನು ಬಿಟ್ಟು ಮೂಲ ಬಂಡವಾಳವನ್ನೇ ಬೇಕಾಬಿಟ್ಟಿಯಾಗಿ ಬಳಸಿಕೊಳ್ಳುತ್ತಿದ್ದೇವೆ. ಜೀವಮಂಡಲದ ಮೇಲೆ ದಬ್ಬಾಳಿಕೆ ನಡೆಸದಂತೆ ಬದುಕುವುದರಲ್ಲಿ ನಾಡಿನ ಘನತೆ-ಗೌರವ ಇದೆ.

- ಧನಂಜಯ ಜೀವಾಳ ಬಿ.ಕೆ.
ಪರಿಸರ ಕಾರ್ಯಕರ್ತರು,
ಮೂಡಿಗೆರೆ.

© WCG

# ಕಾಡುಹಂದಿ ಮತ್ತು ರಾಣಿ




ನಾನು ಬದುಕುತ್ತಿರುವ ನೆಲೆಯಲ್ಲಿ ಕಾಡುಪ್ರಾಣಿಗಳನ್ನು ಸಂರಕ್ಷಿಸ ಬೇಕು, ಅಳಿದು ಉಳಿದಿರುವ ಆ ವನ್ಯ ಜೀವಿಗಳನ್ನು ಅವು ನೆಲೆಸಿರುವ ನೆಲೆಗಳಲ್ಲೇ ಬಾಳುವಂತೆ ಮಾಡಬೇಕು ಎಂಬುದೇನೋ ನಮ್ಮೆಲ್ಲರ ದೊಡ್ಡ ಆಸೆ. ಒಂದೆಡೆ ಶತಶತಮಾನಗಳಿಂದ ಜೀವಿಸುತ್ತಾ ಬಂದಿರುವ ವನ್ಯರಾಶಿ, ಇನ್ನೊಂದೆಡೆ ಈ ಭೂಮಿ ಇರುವುದೇ ನನಗಾಗಿ ಎಂದು ಲಂಗುಲಗಾಮಿಲ್ಲದೆ ಸಕಲವನ್ನು ಕಬಳಿಸುತ್ತಿರುವ ಮಾನವರಾದ ನಮ್ಮ ದುರಾಸೆ. ಈ ಎಲ್ಲಾ ಆಯಾಮಗಳ ಸಮೀಕರಣವನ್ನು ಸರಿದೂಗಿಸಿಲಾಗದೆ  ಕಾಡುಪ್ರಾಣಿಗಳ ಸಂರಕ್ಷಣೆಯ ಈ ಕಾರ್ಯವನ್ನು ಕಾರ್ಯರೂಪಕ್ಕೆ ತರಲು ಹೊರಟಾಗ ಎದುರಾಗುವ ಎಲ್ಲ ಸಂಕೀರ್ಣತೆಯನ್ನು ಅನುಭವಿಸಿಯೇ ತೀರಬೇಕು.

ನೂರಾರು ಎಕರೆ ವಿಶಾಲವಾದ ನಮ್ಮ ತೋಟದ ಕಾಡಿಗೆ ಎಲ್ಲಿಂದಲೋ ಐದಾರು ಕಾಡು ಹಂದಿಗಳು ಬಂದು ವಾಸಿಸ ತೊಡಗಿದವು , ರಾತ್ರಿ ವೇಳೆ ನಮ್ಮ ಕಾಫಿ ಗಿಡಗಳಲ್ಲಿ ಸಿಗುವ ಗೆಡ್ಡೆಗಳನ್ನು ತಿನ್ನಲು ತನ್ನ ಬಲವಾದ ಮೂತಿಯಿಂದ ನೆಲವನ್ನು ಅಗೆದು ಉತ್ತು ಅಸನು ಮಾಡಿ ಹೋಗುತ್ತಿದ್ದವು. ಸುತ್ತಲೂ ಸೋಲಾರ್ ಬೇಲಿ ಇರುವ ನಮ್ಮ ತೋಟ ಇವಕ್ಕೆ ಸೇಫ್ ಎನಿಸಿತೋ ಏನೋ , ಆಗಾಗ ಬರುತ್ತಿದ್ದ ಗುಂಪು ಈಗೀಗ ದಿನಾಲೂ ಬರಲು ಶುರು ಮಾಡಿದವು. ಹುಣಸೆಯ ಮರದ ಕೆಳಗೆ ಉದುರಿದ್ದ ಹುಣಸೆಕಾಯಿಗಳನ್ನು ಚಕ್ಕುಲಿಗಳಂತೆ ತಿಂದು ಖಾಲಿಮಾಡಿದವು.





ಬೆಳಕಿರುವಾಗ ನಿಬಿಡ ಬಿದಿರು ಮೆಳೆಗಳಲ್ಲಿ ಮಲಗಿರುತ್ತಿದ್ದವು. ಒಮ್ಮೆ ನಾನು ನಮ್ಮ ಕೆರೆಯ ಬಳಿ ಗೂಡು ಮಾಡಿದ್ದ ಬಲು ಅಪರೂಪದ “ಬ್ಲೂ ಬಿಯರ್ಡ ಬೀ ಯಟರ್” ಹಕ್ಕಿ ಯ ಫೋಟೊ ತೆಗೆಯಲು ಕೆರೆಯ ಆಚೆ ದಡದಲ್ಲಿ ಹೈಡಾಕಿ ಕುಳಿತಿದ್ದೆ. ಮಟ ಮಟ ಮಧ್ಯಾಹ್ನವೇ ನೀರುಕುಡಿಯಲೆಂದು ಬಂದ ಆ ಕಾಡು ಹಂದಿಗಳ ಗುಂಪು ನಾನು ಅಲ್ಲೇ ಕುಳಿತಿದ್ದನ್ನು ಗಮನಿಸಲೇ ಇಲ್ಲ. ಅಳುಕಿನಿಂದಲೆ ಕೆರೆಯ ತಟದಲ್ಲಿದ್ದ ಬಿದಿರಿನ ಮೆಳೆಯಲ್ಲಿ ಅವಿತು ಒಂದೋಂದೆ ನೀರಿಗೆ ಬಲು ಎಚ್ಚರಿಕೆಯಿಂದ ಬಂದು ನೀರು ಕುಡಿದು ಹೋದವು. ಅದರಲ್ಲಿ ಒಂದು ಸಣ್ಣ ಮರಿ ಮಾತ್ರ ಅದರ ಅಮ್ಮನ ಮಾತು ಕೇಳದೆ ದಡದ ಕೆಸರಲ್ಲಿ ಉರುಳಾಡಿ ಕೆಸರು ಮೆತ್ತಿಕೊಂಡು ಖುಷಿಪಟ್ಟಿತು.



ಕಾಡುಹಂದಿಗಳು ಚಿರತೆಯ ಪ್ರಮುಖ ಆಹಾರ. ಅಲ್ಲೋ ಇಲ್ಲೋ ಇದ್ದ ಒಂದೆರಡು ಚಿರತೆಗಳು ಇತ್ತೀಚೆಗೆ ಊರು ನಾಯಿಗಳ ಮಾಂಸದ ರುಚಿ ಪಳಗಿ ಊರುಗಳ ಕಡೆ ಹೊರಟು ನೈಸ್ ರಸ್ತೆಯಂತಹ ಹೆದ್ದಾರಿಗಳಲ್ಲಿ ವೇಗವಾಗಿ ಚಲಿಸುವ ಲಾರಿಗಳ ಚಕ್ರಕ್ಕೆ ಸಿಕ್ಕಿ ಸತ್ತು ಹೋಗಿದ್ದರಿಂದ ಕಾಡಲ್ಲಿ ಚಿರತೆಗಳ ಸಂಖ್ಯೆ ಕಡಿಮೆ. ನಮ್ಮ ತೋಟದ ಕಾಡಿನ ಸುತ್ತಾ ಇರುವ ಕಳ್ಳ ಬೇಟೆಗಾರರು ಗುಂಪು ಕಾಡಿನಿಂದ ನಮ್ಮ ಕೆರೆಗೆ ನೀರು ಕುಡಿಯಲು ಬರುವ ಈ ಕಾಡು ಹಂದಿಗಳಿಗೆ ಕ್ಲಚ್ ವೈರಿನಿಂದ ಉರುಳಾಕಿ ಹಿಡಿದು ಹುರಿದು ತಿಂದಿದ್ದಾರೆ. ಮತ್ತೆ ಕೆಲವು ಬಾಯಿ ಚಪಲದ ಬಕಾಸುರರು, ಅದ್ಯಾವುದೋ ಕೇಪು ಉಂಡೆ ಬಾಂಬನ್ನು



ಕೋಳಿ ಕರಳಿನಲ್ಲೋ, ರಾಗಿಮುದ್ದೆಯಲ್ಲೋ ಇಟ್ಟು ಹಂದಿಗಳು ಓಡಾಡುವ ಜಾಡಿನಲ್ಲಿ ಮಡಗಿ ಹಂದಿಗಳನ್ನು ಸಿಡಿಸಿ ಸಾಯಿಸಿ ಗುಳುಂ ಮಾಡಿದ್ದಾರೆ. ಕೆಲವೊಮ್ಮೆ ಈ ಕಳ್ಳಬೇಟೆಗಾರರ ಬಾಂಬನ್ನು ಮುದ್ದೆಯ ಆಸೆಗೆ ತಿಂದ ಕೆಲವು ಊರುನಾಯಿಗಳ ತಲೆ ಸಿಡಿದು ಊಟ ತಿನ್ನಲಾಗದೆ ನರಳಿ ನರಳಿ ಸತ್ತಿದ್ದನ್ನು ಕಣ್ಣಾರೆ ಕಂಡಿದ್ದೇನೆ.

ನಮ್ಮ ತೋಟದಲ್ಲಿ ನೂರಾರು ತೆಂಗಿನ ಮರಗಳಿವೆ ಮರಗಳಲ್ಲೇ ಹಣ್ಣಾಗಿ ಕೆಳಗೆ ಬೀಳುವ ಕಾಯಿಗಳನ್ನು ಸೀಳಿ ತಿನ್ನುವುದಕ್ಕೆ ಪಳಗಿ ಕೊಂಡ ಅವು ನಾವು ಮನೆಯ ಮುಂದೆ ಗುಡ್ಡೆಯಾಕಿದ್ದ ತೆಂಗಿನಕಾಯಿಗಳನೆಲ್ಲಾ ಸೀಳಿ ತಿಂದು ಮುಗಿಸಿಬಿಟ್ಟವು. ನಮಗೂ ಕೆಲವು ತೆಂಗಿನ ಕಾಯನ್ನು ಸುಲಿದು ಕೊಟ್ಟವು.!

ಒಟ್ಟಿನಲ್ಲಿ ನಮ್ಮ ಮನೆಯ ಹತ್ತಿರಕ್ಕೆ ದಿನವು ಬರುತ್ತಿದ್ದ ಹಂದಿಗಳ ಫೋಟೊ ತೆಗೆಯಲು ಹುಣಸೆ ಮರದ ಐದಡಿ ಎತ್ತರ ಕೊಂಬೆಯ ಮೇಲೆ ಕಾದು ಕುಳಿತೆ, ಗನ್ನಿನ ಬದಲು,ಕ್ಯಾಮರ ಹಿಡಿದು ಬೇಟೆಗಾರನಂತೆ . ದೂರದಲ್ಲಿ ನನ್ನ ಟಾರ್ಚ್ ಬೆಳಕಿಗೆ ಕಂಡ ಆ ಹೊಳೆಯುವ ಕಣ್ಣುಗಳು ಮೈಮೇಲೆ ಪಟ್ಟಿಗಳಿರುವ ಸಣ್ಣ ಸಣ್ಣ ಹತ್ತಾರು ಮರಿಗಳ ಗುಂಪು ನಮ್ಮ ನಾಯಿ ರಾಣಿಯ ಕಡೆಗೆ ಹೊರಟವು.

ರಾಣಿಯ ತಟ್ಟೆಯ ಅನ್ನವನ್ನೆಲ್ಲಾ ಖಾಲಿ ಮಾಡಿದವು. ತಟ್ಟೆಯ ಸದ್ದನ್ನು ಕೇಳಿ ಓಡೋಡಿ ಬಂದ ರಾಣಿ ಈ ಆಗಂತುಕರು ತನ್ನ ಊಟವನ್ನು ಕದ್ದು ತಿನ್ನುತ್ತಿರುವುದನ್ನು ಕಂಡು ಕೋಪಗೊಂಡು ಬೊಗಳಿ ಪ್ರತಿಭಟಿಸಿತು. ದೂರದಲ್ಲಿದ್ದ ಹೆಣ್ಣಂದಿಯೊಂದು ಗುರ್ ಎಂದು ಜೋರಾಗಿ ಬಂದು ರಾಣಿಗೆ ಇಕ್ಕಿತು. ರಾಣಿಯೋ ಕುಯ್ ಕುಯ್ ಎಂದು ಮೂಲೆ ಸೇರಿತು. ರಾಣಿಯ ಗಂಡ ಟೈಗರನೂ ಓಡಿ ಬಂದು ಹೆಂಡತಿ ರಕ್ಷಣೆಗೆ ನಿಂತ. ಎರಡೂ ನಾಯಿಗಳೂ ಜೊತೆ ಸೇರಿ ಒಂದು ಪಡ್ಡೆ ಮರಿಯನ್ನು ಹಿಡಿದು ಸಾಯಿಸಿಬಿಟ್ಟವು ಆದರೆ ತಿನ್ನಲಿಲ್ಲ!

ಬೆಳಿಗ್ಗೆ ಬಂದ ತೋಟದ ಮೇಸ್ತ್ರಿ ಗುರುಸಂತಪ್ಪನು ಆ ಸತ್ತ ಹಂದಿಮರಿಯನ್ನು
ಗುಂಡಿ ತೋಡಿ ಮಣ್ಣು ಮಾಡಿ ಬಿಡಿ ಎಂದು ಆಳುಗಳಾದ ಕುಳ್ಳೀರ
ಮುತ್ತಪ್ಪನಿಗೆ ಆಜ್ಞಾಪಿಸಿದ. ಅವರು ತಮ್ಮ ಮುಂದೆ ಸತ್ತು ಬಿದ್ದಿರುವ ಪಡ್ಡೆ
ಹಂದಿಯ ಮಾಂಸದ ರುಚಿಯನ್ನು ಕೊಂಡಾಡುತ್ತಾ
ರಾಣಿಯನ್ನು ಕೊಂಡಾಡುತ್ತಾ, ಇಂತಹ ರುಚಿಯಾದ ಮಾಲನ್ನು
ಮಣ್ಣಿಗಾಕಿಸುತ್ತಿರುವ ಮೇಸ್ತ್ರಿಯನ್ನು ಮನಸಾರೆ ಬೈಯುತ್ತಾ
. ಜೊಲ್ಲುಸುರಿಸುತ್ತಾ ಮಣ್ಣು ಮಾಡಿದರು..



© WCG



# ಹಕ್ಕಿ ಲೋಕ

*** ಬೆಳವನ ಹಕ್ಕಿ**

**ವೈಜ್ಞಾನಿಕ ಹೆಸರು:** ***Streptopelia senegalensis***

**ಇಂಗ್ಲೀಷ್ ಹೆಸರು:** **Little Brown Dove**




ಬೆಂಗಳೂರಿನ ಯಾವುದೋ ಸ್ಕೂಲಿನಲ್ಲಿ ಟೀಚರಾಗಿ ಕೆಲಸ ಮಾಡಿಕೊಂಡಿದ್ದ ಕುಳ್ಳಗೆ ಕಪ್ಪಗಿದ್ದ ಒಬ್ಬ ಕ್ರಿಶ್ಚಿಯನ್ ವ್ಯಕ್ತಿ, ವಾಜರಗುದಿಸಲಾದ ನಮ್ಮ ಊರಿನಲ್ಲಿ ಸೈಟ್ ತೆಗೆದುಕೊಂಡು ರಜಾದಿನಗಳಲ್ಲಿ ಆಗಾಗ ಬಂದು ಹೋಗುತ್ತಿದ್ದ. ನಮ್ಮೂರಿನ ಮರಿಗ, ಮೇಲ್ಬೀದಿಯ ಗುಡಿಸಲು ರಾಮಚಾರಿ, ಶಿಕಾರಿ ದುರ್ಗ, ಊರ ಯಜಮಾನ ತಿಮ್ಮ. . . . ಎಲ್ಲರಿಗೂ ಇವನು ಒಮ್ಮೆ ಬಿರಿಯಾನಿ ಮಾಡಿಸಿ ಹಾಕಿಸಿದ್ದರಿಂದ ಇವರೆಲ್ಲರಿಗೂ ಮೇಷ್ಟ್ರು ಚಿರಪರಿಚಿತ. ಇವನಿಗೆ ಇಪ್ಪತ್ತೆರಡು ವರ್ಷದ ಮಗನೊಬ್ಬನಿದ್ದ. ಅವನಿಗೆ ಊರಿನವರು ಬಾಬು ಎಂದು ಕರೆಯುತ್ತಿದ್ದರು. ತಂದೆ ಊರಿನಲ್ಲಿ ಇಲ್ಲದೆ ಇದ್ದಾಗ ಮಗ ಬಾಬುವು ಮೂರು-ನಾಲ್ಕುದಿನ ಇದ್ದು. ಮರಿಗ, ದುರ್ಗನ ಜೊತೆ ಊರಿನಲ್ಲಿ ಒಬ್ಬನಾಗಿ ಇದ್ದು, ದುರ್ಗನ ಕಳ್ಳಗನ್ನಿನಿಂದಲೇ ಕಾಡುಬೇಟೆಯಲ್ಲಿ ಪಳಗಿಕೊಂಡಿದ್ದ. ರಾತ್ರಿಯೆಲ್ಲ ಕಾಡುಹಂದಿ, ಮುಳ್ಳುಹಂದಿ, ಜಿಂಕೆ, ಮೊಲ, ಬಾಬಾರಬೆಕ್ಕು, ತೋಲಕ್ಕಿ, ಕೀರ ಮತ್ತಿತ್ತರ ಕಾಡು ಪ್ರಾಣಿಗಳನ್ನು ಬೇಟೆಯಾಡಿ ಮಜಮಾಡುತ್ತಿದ್ದ.

ಒಂದು ದಿನ ಬಾಬು ಜೊತೆಯಲ್ಲಿ ಒಂದು "ಏರ್ಗನ್" ಕೊಂಡುಕೊಂಡು ಬಂದಿದ್ದ. ಮನೆಯ ಗೋಡೆಯ ಮೇಲೆ ಸೀಮೆಸುಣ್ಣದಿಂದ ಐದು ಸೆಂಟಿಮೀಟರ್ ವ್ಯಾಸಕ್ಕೆ ರೌಂಡಪ್ ಮಾಡಿ ಹತ್ತು-ಹದಿನೈದು ಮೀಟರ್ ದೂರದಿಂದ ಗುರಿಯಿಡಿದು ಪ್ರಾಕ್ಟಿಸ್ ಮಾಡುತ್ತಿದ್ದ. ಗುರಿಯಿಡುವುದರಲ್ಲಿ ನಿಪುಣನಾಗಿದ್ದ ಬಾಬು ಪ್ರತಿದಿನ



ಸುಮಾರು ಮೂವತ್ತು ಕಾಡು ಪಾರಿವಾಳಗಳನ್ನು ಬೇಟೆಮಾಡುತ್ತಿದ್ದ. ಕಾಡು ಪಾರಿವಾಳ ಮಾಂಸ ತುಂಬಾ ರುಚಿ ಇರುವುದರಿಂದ ಶಿಕಾರಿಗಾರರು ಇದನ್ನು ತುಂಬ ಬೇಟೆಮಾಡುತ್ತಾರೆ.

ತೇಟ್ ಗೊರವಂಕ ಗಾತ್ರದ ಕಂದು ಮಿಶ್ರಿತ ಬೂದುಹಕ್ಕಿ, ದೇಹದ ಮೇಲ್ಭಾಗ ಕಂದು, ಹೊಟ್ಟೆಯ ತಳಭಾಗದಲ್ಲಿ ತಿಳಿ ಕಂದು ಬಣ್ಣ, ಕತ್ತಿನಲ್ಲಿ ಕಂದು-ಕಪ್ಪು ಚುಕ್ಕೆಗಳ ಅಗಲ ಪಟ್ಟೆಯಿದೆ, ಇವು ಕಡ್ಡಿಗಳಿಂದ ಕೂಡಿದ ವೃತ್ತಾಕಾರದ ಗೂಡನ್ನು ಮರ ಮೇಲೆ, ಪೊದೆಗಳ ಒಳಗೆ ಕಟ್ಟುತ್ತವೆ. *ಕೂ. . .ರುರು. . .ರುರು. . .*ಎಂದು ಕೂಗುತ್ತವೆ. ರೆಕ್ಕೆಗಳನ್ನು ಪಟಪಟ ಎಂದು ಬಡಿಯುತ್ತಾ ಸುಮಾರು ಕಿಲೋ ಮೀಟರುಗಳ ವರೆಗೆ ನಿಲ್ಲದೆ ಹಾರುತ್ತವೆ. ಸಾಮಾನ್ಯವಾಗಿ ಹಳ್ಳಿಗಳ ಅಕ್ಕಪಕ್ಕದ ಕಾಡಿನ ಅಂಚಿನಲ್ಲೇ ಇದ್ದು. ಊರಿನ ಸುತ್ತ-ಮುತ್ತಲಿರುವ ಸೀಗೆಪೊದೆ, ರಾಗಿಹಳ್ಳಿ ಕಡೆ ಹಾದುಹೋಗಿರುವ ವಿದ್ಯುತ್ ತಂತಿ ಮೇಲೆ, ರಾಗಿ ಮಾಡುವುದಕ್ಕೆ ಮಾಡಿದ ಕಣಗಳಲ್ಲಿನ ಕಾಳುತಿನ್ನಲು ಬಂದಿದ್ದ ಫರೆಸ್ಟ್ ಡವ್ (ಬೆಳವನ ಹಕ್ಕಿ) ಗಳನ್ನು ಬೆಳಿಗ್ಗೆಯಿಂದ ಸಂಜೆವರಿಗೂ ಏರ್ಗನ್ ಗೆ ಹೆಸರುಕಾಳು ಗಾತ್ರದ ಗುಂಡನ್ನು ಲೋಡ್ ಮಾಡಿ ಗುರಿಯಿಡುತ್ತಿದ್ದ. ಸಂಜೆಯಾಗುತ್ತಲೆ ಮರಿಗನನ್ನು ಕೂಡಿ ಆ ಹಕ್ಕಿಗಳ ಪುಕ್ಕ ಎಲ್ಲ ತರಿದು, ಬೆಂಕಿಯಲ್ಲಿ ಸೀದಿ ಮಾಂಸವನ್ನು ದಪ್ಪ-ದಪ್ಪದಾಗಿಯೇ ಕಟ್ ಮಾಡಿ ಬಿರಿಯಾನಿ ಮಾಡಿ ದುರ್ಗನ ಜೊತೆಯಲ್ಲಿ ಎಣ್ಣೆ ಕುಡಿದು ಪಾರ್ಟಿ ಮಾಡುತ್ತಿದ್ದ.

ಏರ್ಗನ್ ನಿಂದ ಗುರಿಯಿಟ್ಟು ಹೊಡೆಯ ಬೇಕಾದರೆ, ಕೆಲವೊಮ್ಮೆ ಹಕ್ಕಿಯ ರೆಕ್ಕೆಯೋ. . . ಅಥವಾ ಕಾಲೋ. . . ಮುರಿದು ಅತ್ತ ಸಾಯದೆ ಇತ್ತ ಬದುಕಲಾಗದೆ ಇರುವ ಹಕ್ಕಿಗಳನ್ನು ಹಿಡಿದುತಂದು ದಾರದಿಂದ ಕಾಲನ್ನು ಕಟ್ಟಿ ದೂರಕ್ಕೆ ಮರದ ಕೊಂಬೆಗೆ ನೇತುಹಾಕಿ ಗುರಿಹಿಡಿಯುತ್ತಿದ್ದ, ಚಿಕ್ಕ ಚಿಕ್ಕ ಮಕ್ಕಳು ಯಾರದರು ಇದ್ದರೆ ಅವರ ಕೈಲಿ ಹಕ್ಕಿಯನ್ನು ಇಡಿಸಿಕೊಂಡು ದೂರಕ್ಕೆ ನಿಲ್ಲಿನಿ ಗುರಿಯಿಟ್ಟು ಮಕ್ಕಳಿಗೆ ಬೀಳದಂತೆ ಹಕ್ಕಿಗೆ ಗುರಿಯಿಡುತ್ತಿದ್ದ, ಆಚ್ಚರಿಯೆಂದರೆ ಅವನ ಗುರಿ ತಪ್ಪದೇ ಹಕ್ಕಿಗೆ ಮಾತ್ರ ಬೀಳುತ್ತಿದ್ದದ್ದು ಅವನ ಪುಣ್ಯ.

ಒಮ್ಮೆ ತಿಮ್ಮಣ್ಣನ ಏಕೈಕ ಮೊಮ್ಮಗನಾದ ತೀಟೆ ಕುಮಾರನ ಕೈಲಿ ಹಕ್ಕಿಯನ್ನು ಕೊಟ್ಟು ದೂರಕ್ಕೆ ನಿಲ್ಲಿಸಿ ಸುಮಾರು ಹತ್ತು ಮೀಟರ್ ದೂರದಿಂದ ಗುರಿಯಿಟ್ಟು ಹೊಡೆದಾಗ ಗುರಿ ಸ್ವಲ್ಪ ಮಿಸ್ ಆಗಿ ಕುಮಾರನ ಕೈಗೆ ಬಿದ್ದಿದ್ದು, ಕುಮಾರನು ಅಳುತ್ತಾ ಚೀರುತ್ತ ನೇರಾ ಮನೆಗೆ ಹೋಗಿ ತಾತನಿಗೆ ಹೇಳಿದ್ದು, ಮನೆಯವರೆಲ್ಲ ಬಾಬುವಿನ ಮೇಲೆ ಜಗಳ ಮಾಡಿ ಗೂಸಕೊಟ್ಟಿದ್ದು ನಮಗೆ ಇನ್ನೂ ನೆನಪಿದೆ. ಅಂದಿನಿಂದ ಮಕ್ಕಳ ಸಹವಾಸಕ್ಕೆ ಬಾರದೆ ಅವನ ಕೆಲಸ ಅವನೇ ಮಾಡಿಕೊಳ್ಳುತ್ತಿದ್ದ.

ಈ ಎಲ್ಲ ಕದಿಮ ಕೆಲಸಗಳನ್ನು ತಿಮ್ಮನು ಬಾಬುವಿನ ತಂದೆಗೆ ತಿಳಿಸಿ "ಸರಿಯಾಗಿ ಬೈದು ಬುದ್ದಿ ಕಲಿಸಿ ಇವೆಲ್ಲ ಸರಿಹೋಗುವುದಿಲ್ಲ ನಾವು ಫಾರಿಸ್ಟ್ರಿಗೆ ಇಡುಕೊಡ್ತಿವಿ". . . ಎಂದು ತರಾಟೆತೆಗೆದುಕೊಂಡರು. ಅದಾದ ಮೇಲೆ ಒಂದೆರಡು ವರ್ಷ ಕದ್ದಿ-ಮುಚ್ಚಿ ಕಳ್ಳ ವ್ಯವಹಾರಗಳನ್ನು ಮಾಡಿಕೊಂಡಿದ್ದ. ನಂತರ ಮದುವೆಯಾಗಿ ಸಿಟಿ ಸೇರಿಕೊಂಡವ ತುಂಬ ವರ್ಷಗಳು ಇತ್ತ ಬರಲೇ ಇಲ್ಲ. ಈಗಲೂ ವರ್ಷಕ್ಕೋ ಆರು ತಿಂಗಳಿಗೋ ಒಂದುಬಾರಿ ತನ್ನ ಹೆಂಡತಿ-ಮಕ್ಕಳ ಜೊತೆಬಂದು ತನ್ನ ಜೊತೆಗಾರರಾದ ಮರಿಗ, ದುರ್ಗರನ್ನು ನೋಡಿಕೊಂಡು ಹೋಗುತ್ತಿರುತ್ತಾನೆ. ಮದುವೆಯಾದ ಮೇಲೆ ಯಾಕೋ ಬೇಟೆಯಾಡುವುದನ್ನು ಬಿಟ್ಟುಬಿಟ್ಟ.!

# ವಿದ್ಯಾರ್ಥಿಗಾಗಿ ವಿಜ್ಞಾನ

## ಸಾಲಾಮಾಂಡರ್ ಕೌತುಕ



ಸಾಲಾಮಾಂಡರ್ ಎಂಬುದು ಕಪ್ಪೆಯ ಗುಂಪಾದ ಉಭಯವಾಸಿಗಳಿಗೆ ಸೇರಿದ ಪ್ರಾಣಿ . ಇವುಗಳ ಜೀವನಶೈಲಿಯಲ್ಲಿ ಮೊಟ್ಟೆಗಳು ನೀರಲ್ಲಿದ್ದು ಒಡೆದು ಮಾರಿಗಳಾದಾಗ ಕಿವಿರುಗಳಿರುತ್ತವೆ. ಕ್ರಮೇಣ ದೊಡ್ಡವಾಗುವಾಗ ನೆಲದ ಮೇಲೆ ಬರಲು ಶ್ವಾಸಕೋಶ ಬೆಳವಣಿಗೆಯಾಗಿ ಕಿವಿರು ಮಾಯಾವಾಗುವುದು ಒಂದು ಪ್ರಮುಖ ಲಕ್ಷಣ.

ಇತ್ತೀಚೆಗೆ ವಿಜ್ಞಾನಿಗಳು ಕಶೇರುಕಗಳ (ವರ್ಟಿಬ್ರೇಟ್ಸ್) ಭ್ರೂಣದಲಿ ದ್ಯುತಿಸಂಶ್ಲೇಷಣೆ ಮಾಡುವ ಜೀವಿಯನ್ನು ಕಂಡು ನಿಬ್ಬೆರಗಾಗಿದ್ದಾರೆ.ಇದಕ್ಕೆ ಕಾರಣಕೂಡ ಇದೆ. ಸಾಮಾನ್ಯವಾಗಿ ಕಶೇರುಕಗಳ ರೋಗನಿರೋಧಕ ಶಕ್ತಿ ಯಾವುದೇ ಹೊರಗಿನ ಜೀವಿಯನ್ನು ಬರಲು ಬಿಡುವುದಿಲ್ಲ. ಆದರೆ ಈ ನಿರೋಧಕತೆಯನ್ನು ವಿರೋದಿಸಿ ಸೂಕ್ಷ್ಮ ಪಾಚಿಯೊಂದು (Oophila amblystomatis) ಬದುಕುಳಿದಿದೆ.

ಸ್ಪಾಟೆಡ್ ಸಾಲಮಾಂಡರ್ ನ ಭ್ರೂಣ ಮತ್ತು ಈ ಏಕ ಕೋಶ ಪಾಚಿ ಅನಾದಿ ಕಾಲದಿಂದಲೂ ಬಾಂಧವ್ಯ ಉಳಿಸಿಕೊಂಡಿವೆ. ಇದೇ ರೀತಿಯ ಪರಸ್ಪಾರಾವಲಂಬನೆಗೆ ಪ್ರಕೃತಿಯಲ್ಲಿ ಅನೇಕ ಉದಾಹರಣೆಗಳಿವೆ. ಕೊಕ್ಕರೆ-ಹಸು, ಪ್ಲೋವರ್ ಹಕ್ಕಿ-ಮೊಸಳೆ, ಫಿಗ್ ವಾಸ್ಪ್-ಫೈಕಸ್ ಮರ, ಕಲ್ಲುಹೂವು-ಪಾಚಿ ಇತ್ಯಾದಿ.

ಚಿತ್ರದಲ್ಲಿ ಕಾಣುವಂತೆ ಸಾಲಾಮಾಂಡರ್ ಭ್ರೂಣದ ಬಣ್ಣ ಹಸಿರಾಗಿರಲು ಪಾಚಿಯೇ ಕಾರಣ. ಭ್ರೂಣಗಳು ಸಾರಜನಕ ಹೆಚ್ಚಿರುವ ವೇಸ್ಟನ್ನು ಹೊರಹಾಕುತ್ತವೆ. ಪಾಚಿ ಇದನ್ನು ಉಪಯೋಗಿಸಿ, ಪ್ರತಿಯಾಗಿ ಆಮ್ಲಜನಕ ಕೊಡುತ್ತವೆ. ಇದನ್ನು ಭ್ರೂಣ ಉಪಯೋಗಿಸಿಕೊಳ್ಳುತ್ತದೆ. ರಿಯಾನ್ ಕರ್ನಿ ಎಂಬಾತ ಈ ಸಂಬಂಧ ಭ್ರೂಣದ ಜೀವಕೋಶಗಳಲ್ಲಿಯೂ ಇದೆ ಎಂದು ಕಂಡು ಹಿಡಿದಿದ್ದಾನೆ. ಎಲೆಕ್ಟ್ರಾನ್ ಮೈಕ್ರೋಸ್ಕೋಪಿನಲ್ಲಿ ನೋಡಿದಾಗ ಭ್ರೂಣದ ಜೀವಕೋಶಗಳಲ್ಲಿನ ಮೈಟೋಕಾಂಡ್ರಿಯ ಪಾಚಿಯ ಆಮ್ಲಜನಕದ ಜೊತೆಗೆ ಪಿಷ್ಟವನ್ನು ಸಹ ಉಪಯೋಗಿಸಿ ಶಕ್ತಿ ತಯಾರಿಸುತ್ತಿರುವುದು ಬೆಳಕಿಗೆ ಬಂದಿದೆ. ಪ್ರಶ್ನೆ ಏನೆಂದರೆ ಇವು ಭ್ರೂಣದೊಳಕ್ಕೆ ಯಾವಾಗ ಬರುತ್ತವೆಯೆಂದು? ಟೈಂ ಲಾಪ್ಸ್ ವೀಡಿಯೋ ಮಾಡಿ ನೋಡಿದಾಗ ಭ್ರೂಣದ ನರವ್ಯೂಹ ಶುರುವಾಗುವಾಗ ಪಾಚಿಯ ಹಸಿರು ಬಣ್ಣ ಒಡೆಯುವಂತೆ ತೋರಿದೆ. ಹೆಣ್ಣು ಸಾಲಾಮಾಂಡರ್ ನ ಅಂಡಾಶಯಗಳಲ್ಲೂ ಈ ಪಾಚಿ ಕಂಡು ಬಂದಿದೆ. ಮೊದಲ ಅಂಡಾಣು ಸೃಷ್ಟಿಯಾದಾಗಲೆ ಇವು ತಾಯಿಯಿಂದ ಬಂದ ಕೊಡುಗೆಯೂ ಇರಬಹುದು. ಅಕಶೇರುಕಗಳಲ್ಲಿ (ಹವಳ) ಈ ರೀತಿಯ ಸಂಬಂಧ ಅಸ್ತಿತ್ವದಲ್ಲುಂಟು.

# ಪಾಳು ನಗರಿ



ಹುಡುಕ ಹೊರಟೇವಾ ನಾವಿಂದು
ಹುಡುಕ ಹೊರಟೇವಾ!!

ನಮ್ಮಿಂದ ಬಲುದೂರದಾ ವನದಲ್ಲಿ
ಮರೆಯಾಗಿ ಅಳಿದೋದ ಆ ವನಜೀವಿಯ.
ಸುಂದರ ಮನೋಹರ ಜಲಧಾರೆಯಾ
ನಮ್ಮ ಈ ಪಾಳು ನಗರಿ ಕಾನನದೊಳಗಾ.

ಎಲ್ಲಿಹವು?
ಆ ನಿನ್ನ ಬಯಕೆಯಾ ಗಿರಿ ಶೃಂಗ ಗಿಳಿ ಬಳಗ.
ಎಲ್ಲವನು ಸಂಹರಿಸಿ ಹುಡುಕುತಿಹೆ. ಏನನ್ನು?
ಉಳಿದಿರುವುದೊಂದೆ ನಿನ್ನ ಪಶುಬುದ್ಧಿ.

ಕೆಲ ಶತಮಾನದೊಳ್ ಜಗಕೆಲ್ಲಾ ದೊರೆಯಾಗಿ
ಸುಖಸೌಧ ತಂತ್ರ ಯಂತ್ರಗಳೇ ಸಾಕೆಂದೆ
ಇಂದೇಕೆ ಹುಡುಕುತಿಹೆ?
ಜೀವಕ್ಕೇ ಬೆಲೆಕಳೆದ ಹುಚ್ಚನಂತೆ.

ನೂರಾರು ಗಿಡಮರಗಂಟಿ
ಮಿಡತೆ ಹುಳು ಹೆಬ್ಬುಲಿ ಆನೆ ಮೀನು
ಎಲ್ಲವೂ ಸತ್ತಾಯ್ತು ಆ ನಿನ್ನ ಘನ ಅಜ್ಞಾನಕ್ಕೆ

ವಿಷ ಉಗುಳಿ, ವಿಷವಿಕ್ಕಿ
ಬಿಸಿಯಾಗಿಸಿದೆ ಜಗವೆಲ್ಲ.
ಇನ್ನಾದರೂ ಸಾಕುಮಾಡಿ ಉಸಿರುಳಿಸಿಕೋ
ಭೂತಾಯಿಯೊಂದಿಗಿನ ಈ ನಿನ್ನ ದೊಂಬರಾಟ

– ಕೃಷ್ಣನಾಯಕ್
9611428901
ಬೆಂಗಳೂರು